**All India Radio: Bangalore**
**National Bulletin In Kannada**
**13.06.2025 / 1.10 pm**
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

**<><*<><>*><>**

**ಮುಖ್ಯಾಂಶಗಳು :**

೧. ಅಹಮದಬಾದ್ ವಿಮಾನ ದುರಂತ; ಪ್ರಧಾನಿ ನರೇಂದ್ರ ಮೋದಿ ಅವರಿಂದ ಘಟನಾಸ್ಥಳ ಪರಿಶೀಲನೆ, ಸಂತ್ರಸ್ಥರ ಭೇಟಿ

೨. ನವದೆಹಲಿಯಲ್ಲಿಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಚೀನಾ ಉಪ ವಿದೇಶಾಂಗ ಸಚಿವ ಭೇಟಿ; ದ್ವಿಪಕ್ಷಿಯ ಸಹಕಾರ ಬಲವರ್ಧನೆಗೆ ಒತ್ತು

೩. ಇರಾನ್ ಮೇಲೆ ಇಸ್ರೆಲ್ ವೈಮಾನಿಕ ದಾಳಿ; ಸಂವಹನದ ಮೂಲಕ ಸಮಸ್ಯೆ ಪರಿಹಾರಕ್ಕೆ ಭಾರತದಿಂದ ಸಲಹೆ

೪. ಮುಂದಿನ ೩ ದಿನಗಳಲ್ಲಿ ದಕ್ಷಿಣ ಭಾರತ ರಾಜ್ಯಗಳಲ್ಲಿ ಭಾರೀ ಮಳೆ ಸಾಧ್ಯತೆ; ಉತ್ತರ ಭಾರತದಲ್ಲಿ ತಾಪಮಾನ ಹೆಚ್ಚಳ

**><><><><><<><><><><><><**

ಗುಜರಾತ್‌ನ ಅಹಮದಾಬಾದ್‌ನಲ್ಲಿ ೨೪೦ಕ್ಕೂ ಅಧಿಕ ಜನರ ಸಾವಿಗೆ ಕಾರಣವಾದ ವಿಮಾನ ದುರಂತದ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಇಂದು ಅಹಮದಾಬಾದ್‌ನ ಸಿವಿಲ್ ಆಸ್ಪತ್ರೆಗೆ ಭೇಟಿ ನೀಡಿ ಚಿಕಿತ್ಸೆ ಪಡೆಯುತ್ತಿದ್ದ ಸಂತ್ರಸ್ತರ ಆರೋಗ್ಯ ವಿಚಾರಿಸಿದರು. ಬಳಿಕ ಸಾಮಾಜಿಕ ಮಾಧ್ಯಮದಲ್ಲಿ ಈ ಭೀಕರ ದುರಂತದಿಂದ ದೇಶ ಶೋಕ ಸಾಗರದಲ್ಲಿ ಮುಳುಗಿದೆ ಎಂದಿರುವ ಪ್ರಧಾನಿ, ಈ ಹೃದಯ ವಿದ್ರಾವಕ ಘಟನೆಯಿಂದ ಸಂತ್ರಸ್ತ ಕುಟುಂಬಗಳಿಗೆ ಸಾಂತ್ವಾನ ಹೇಳಿದರು. ಇದೇ ವೇಳೆ ಪ್ರಧಾನಿ, ಘಟನೆಯಲ್ಲಿ ಪ್ರಾಣಾಪಾಯದಿಂದ ಪಾರಾದ ವಿಶ್ವಾಸ್ ಕುಮಾರ್ ರಮೇಶ್ ಅವರನ್ನು ಭೇಟಿಯಾದರು. ಪ್ರಸಾರ ಭಾರತಿ ಬಾತ್ಮಿದಾರರೊಂದಿಗೆ ವಿಶ್ವಾಸ್ ತಮ್ಮ ಅನುಭವವದ ಬಗ್ಗೆ ಹೇಳಿಕೊಂಡಿದ್ದಾರೆ. ಬಳಿಕ ಪ್ರಧಾನಿ, ಅಹಮದಾಬಾದ್ ನಲ್ಲಿ ಪರಿಶೀಲನಾ ಸಭೆ ನಡೆಸಿ ಅಧಿಕಾರಿಗಳಿಂದ ಘಟನೆ ಕುರಿತು ಮಾಹಿತಿ

ಪಡೆದುಕೊಂಡರು. ಘಟನೆಯಲ್ಲಿ ಮೃತಪಟ್ಟ ಗುಜರಾತ್ ಮಾಜಿ ಮುಖ್ಯಮಂತ್ರಿ ವಿಜಯ ರೂಪಾಣಿ ಅವರ ಕುಟುಂಬ ಸದಸ್ಯರನ್ನು ಪ್ರಧಾನಿ ನರೇಂದ್ರ ಮೋದಿ ಭೇಟಿಯಾದರು. ಗುರುತು ಪತ್ತೆಯಾಗಿರುವ ಪಾರ್ಥಿವ ಶರೀರಗಳನ್ನು ಅವರವರ ಕುಟುಂಬಗಳಿಗೆ ಮರಣೋತ್ತರ ಪರೀಕ್ಷೆಯ ಬಳಿಕ ಹಸ್ತಾಂತರಿಸಲಾಗುತ್ತಿದೆ.

**ಧ್ವನಿ : ವಿಶ್ವಾಸ್ ಕುಮಾರ್ ರಮೇಶ್(೨೭ಸೆಕೆಂಡ್ಸ್)**

**><><><><<><><><><><><**

ನವದೆಹಲಿಯಲ್ಲಿಂದು ವಿದೇಶಾಂಗ ಕಾರ್ಯದರ್ಶಿ ವಿಕ್ರಂಮಿಸ್ರಿ ಚೀನಾ ಉಪವಿದೇಶಾಂಗ ಸಚಿವ ಸುನ್ ವೆಡಾಂಗ್ ಅವರನ್ನು ಭೇಟಿಮಾಡಿ ಭಾರತ ಚೀನಾ ನಡುವಿನ ದ್ವಿಪಕ್ಷಿಯ ಸಂಬಂಧಿಗಳ ಪ್ರಗತಿ ಪರಿಶೀಲನೆ ನಡೆಸಿದರು.  ಭೇಟಿಯ ವೇಳೆ ಉಭಯ ನಾಯಕರು ಜನಕೇಂದ್ರಿತ ಸಂವಹನಕ್ಕೆ ಆದ್ಯತೆ ನೀಡುತ್ತಾ ಸಂಬಂಧಗಳನ್ನು ಸ್ಥಿರಗೊಳಿಸಿ ಪುನರ್ ನಿರ್ಮಿಸಲು ಸಹಕರಿಸುವ ಕುರಿತು ಒಮ್ಮತ ವ್ಯಕ್ತಪಡಿಸಿದ್ದಾರೆ ಎಂದು ವಿದೇಶಾಂಗ ಸಚಿವಾಲಯ ತಿಳಿಸಿದೆ.  ಈ ವರ್ಷದ ಕೈಲಾಸ ಮಾನಸಸರೋವರ ಯಾತ್ರೆ ಪುನಾರಾರಂಭವಾಗಲು ಚೀನಾ ನೀಡಿದ ಸಹಕಾರಕ್ಕೆ ವಿಕ್ರಮ ಮಿಸ್ರಿ ಕೃತಜ್ಞತೆ ಸಲ್ಲಿಸಿದರು. ಆರ್ಥಿಕ ಮತ್ತು ವ್ಯಾಪಾರ ಕ್ಷೇತ್ರಗಳನ್ನು ಒಳಗೊಂಡಂತೆ ಕ್ರಿಯಾತ್ಮಕ ಸಂವಾದ ನಡೆಸಲು ಉಭಯ ನಾಯಕರಲ್ಲಿ ಒಮ್ಮತ ವ್ಯಕ್ತವಾಗಿದೆ.  ಇದೇ ವೇಳೇ ಭಾರತ ಮತ್ತು ಚೀನಾ ನಡುವಿನ ನೇರ ವಾಯು ಸೇವೆಗಳನ್ನು ಪುನರಾರಂಭಿಸುವ ಪ್ರಕ್ರಿಯೆ ವೇಗಗೊಳಿಸಲು ಉಭಯ ನಾಯಕರು ಒಪ್ಪಿಗೆ ಸೂಚಿಸಿದ್ದಾರೆ ಹಾಗೆಯೇ ಪರಿಷ್ಕೃತ ವಾಯು ಸೇನಾ ಒಪ್ಪಂದವನ್ನು ಶೀಘ್ರ ಅಂತಿಮಗೊಳಿಸುವ ಆಶಾಭಾವನೆಯನ್ನು ವಿಕ್ರಂ ಮಿಸ್ರಿ ವ್ಯಕ್ತ ಪಡಿಸಿದ್ದಾರೆ.  ಭಾರತ-ಚೀನಾ ರಾಜತಾಂತ್ರಿಕ ಸಂಬಂಧಗಳು ಸ್ಥಾಪನೆಗೊಂಡು ೭೫ನೇ ವರ್ಷಾಚರಣೆಯ ಅಂಗವಾಗಿ ಯೋಜಿಸಲಾಗಿರುವ ಕಾರ್ಯ ಚಟುವಟಿಕೆಗಳ ಕುರಿತು ಉಭಯ ರಾಷ್ಟ್ರಗಳು ಪರಿಶೀಲನೆ ನಡೆಸಿದ್ದು, ಸಹಕಾರಕ್ಕಾಗಿ ಒಪ್ಪಿಗೆ ಸೂಚಿಸಿದೆ.

**><><><><<><><><><><><**

ಕಳೆದ ರಾತ್ರಿ ಇಸ್ರೇಲ್ ವಾಯುಪಡೆ ಇರಾನ್ ಮೇಲೆ ವೈಮಾನಿಕ ದಾಳಿ ನಡೆಸಿದೆ. ಇದರ ಬೆನ್ನಲ್ಲೆ ಇರಾನ್ ನ ರಾಜಧಾನಿ ಟೆಹರಾನ್‌ನ ಹಲವೆಡೆ ಸ್ಫೋಟದ ಸದ್ದು ಆವರಿಸಿತ್ತು. ಈ ದಾಳಿ ಇರಾನ್ ನ ಪರಮಾಣು ಹಾಗೂ ಮಿಲಿಟರಿ ತಾಣಗಳನ್ನು ಗುರಿಯಾಗಿಸಿ ನಡೆಸಿದ ದಾಳಿಯಾಗಿತ್ತೆಂದು ಇಸ್ರೇಲ್ ರಕ್ಷಣಾ ಸಚಿವ ಇಸ್ರೇಲ್ ಕಾಟ್ಸ್ ಹೇಳಿದ್ದಾರೆ. ಇರಾನ್ ಮೇಲೆ ಇಸ್ರೇಲ್ ನಡೆಸಿರುವ

ದಾಳಿಯಲ್ಲಿ ಅಮೆರಿಕಾದ ಯಾವ ಪಾತ್ರ ಇಲ್ಲವೆಂದು ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮಾರ್ಕೋರೂಬಿಯೊ ಹೇಳಿದ್ದಾರೆ. ಆ ಪ್ರದೇಶದಲ್ಲಿರುವ ಅಮೆರಿಕಾ ಪಡೆಗಳ ಸುರಕ್ಷತೆ ನಮ್ಮ ಪ್ರಥಮ ಆಧ್ಯತೆಯಾಗಿದೆ. ದಾಳಿ ಬೆನ್ನಲ್ಲಿ ಇಸ್ರೆಲ್ ನಲ್ಲಿರುವ ಅಮೆರಿಕದ ನಾಗರಿಕರಿಗೆ ಅಮೆರಿಕಾ ವಿದೇಶಾಂಗ ಇಲಾಖೆ ಭದ್ರತಾ ಅಲರ್ಟ್ ಜಾರಿಮಾಡಿದೆ. ಇಸ್ರೆಲ್ ಮತ್ತು ಇರಾನ್ ನಲ್ಲಿರುವ ಭಾರತೀಯ ದೂತಾವಾಸ ಕಚೇರಿಗಳು ಅಲ್ಲಿರುವ ಭಾರತೀಯ ಪ್ರಜೆಗಳು ಹೆಚ್ಚಿನ ನಿಗವಹಿಸಿ ಸುರಕ್ಷಿತ ಮಾರ್ಗಸೂಚನೆ ಪಾಲಿಸುವಂತೆ ಸಲಹೆ ನೀಡಿತು. ಈ ಕುರಿತಂತೆ ಸಾಮಾಜಿಕ ಮಾಧ್ಯಮದಲ್ಲಿ ಪೋಸ್ಟ್ ಮಾಡಲಾಗಿದ್ದು ಭಾರತೀಯರು ಅನಗತ್ಯ ಪ್ರಯಾಣದಿಂದ ದೂರವಿರಲು ಹಾಗೂ ಸುರಕ್ಷತಾ ಶಿಬಿರಗಳ ಹತ್ತಿರವಿರುವಂತೆ ಸೂಚಿಸಲಾಗಿದೆ.

><><><><><<><><><><><

ಇಸ್ರೇಲ್ ಮತ್ತು ಇರಾನ್ ನಡುವಿನ ಇತ್ತೀಚಿನ ಬೆಳವಣಿಗೆಯನ್ನು ಗಂಭೀರವಾಗಿ ಗಮನಿಸುತ್ತಿರುವ ಭಾರತ ಉದ್ವಿಗ್ನತೆಯನ್ನು ಹೆಚ್ಚಿಸುವ ಯಾವುದೇ ಕ್ರಮಗಳಿಂದ ದೂರವಿರುವಂತೆ ಮನವಿ ಮಾಡಿದೆ. ಪರಿಸ್ಥಿತಿ ತೀವ್ರಗೊಳ್ಳದಂತೆ ನೊಡಿಕೊಳ್ಳಲು ಹಾಗೂ ಮೂಲಭೂತ ಸಮಸ್ಯೆಗಳ ಪರಿಹಾರಕ್ಕೆ ಸಂವಹನ ಮತ್ತು ರಾಜತಾಂತ್ರಿಕ ಮಾರ್ಗಗಳನ್ನು ಬಳಸಿಕೊಳ್ಳುವಂತೆ ಸಲಹೆ ನೀಡಿದೆ. ಪರಮಾಣು ತಾಣಗಳ ಮೇಲಿನ ದಾಳಿ ಸೇರಿದಂತೆ ಇತರ ವರದಿಗಳನ್ನು ಭಾರತ ಮೇಲ್ವಿಚಾರಣೆ ನಡೆಸುತ್ತಿದೆ.

><><><><><<><><><><><

ಮುಂದಿನ ಮೂರು ದಿನಗಳಲ್ಲಿ ಕರ್ನಾಟಕ, ಕೇರಳ, ಮಾಹೆ, ತಮಿಳುನಾಡು, ಪುದುಚೇರಿ, ಕಾರೈಕಲ್, ಕೊಂಕಣ, ಗೋವಾ ಮತ್ತು ಮಹಾರಾಷ್ಟ್ರಗಳಲ್ಲಿ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಭಾರತೀಯ  ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ. ಈ ರಾಜ್ಯಗಳ ಪ್ರತ್ಯೇಕ ಸ್ಥಳಗಳಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದ್ದು, ಗಾಳಿಯು ಗಂಟೆಗೆ ೬೦ ರಿಂದ ೭೦ ಕಿಲೋಮೀಟರ್ ವೇಗದಲ್ಲಿ ಬೀಸಲಿದೆ. ಈಶಾನ್ಯ ರಾಜ್ಯಗಳಲ್ಲಿ ಮುಂದಿನ ಎರಡು ಮೂರು ದಿನಗಳವರೆಗೆ ಸಾಧಾರಣದಿಂದ ಭಾರೀ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ. ಈ ನಡುವೆ, ದೆಹಲಿ, ಪಂಜಾಬ್, ಹರಿಯಾಣ, ಚಂಡೀಗಢ, ರಾಜಸ್ಥಾನ, ಉತ್ತರ ಪ್ರದೇಶ ಮತ್ತು ಹಿಮಾಚಲ ಪ್ರದೇಶದಲ್ಲಿ ಬಿಸಿಲಿನ ತಾಪಮಾನ  ಮುಂದುವರಿಯುವ ಸಾಧ್ಯತೆಯಿದೆ. ಮುಂದಿನ ೨೪ ಗಂಟೆಗಳಲ್ಲಿ ದೆಹಲಿ, ಪಂಜಾಬ್, ಹರಿಯಾಣ ಮತ್ತು ರಾಜಸ್ಥಾನದ ಪ್ರತ್ಯೇಕ ಸ್ಥಳಗಳಲ್ಲಿ ರಾತ್ರಿಯ ವೇಳೆ ಉಷ್ಣ ವಾತಾವರಣ ಇರಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ

ನೀಡಿದೆ. ಈ ನಡುವೆ ಕರ್ನಾಟಕದ ವಿವಿಧ ಭಾಗಗಳಲ್ಲಿ ಭಾರಿ ಮಳೆಯ ಆರ್ಭಟ ಮುಂದುವರಿದಿದ್ದು, ಜನಜೀವನದ ಮೇಲೆ ಪರಿಣಾಮ ಬೀರುತ್ತಿದೆ. ಕರಾವಳಿ ಪ್ರದೇಶಗಳ ಜೊತೆಗೆ ಉತ್ತರ ಕರ್ನಾಟಕದ ಬೆಳಗಾವಿ, ಧಾರವಾಡ, ಗದಗ, ಹಾವೇರಿ ಜಿಲ್ಲೆಗಳಲ್ಲಿ ಭಾರಿ ಮಳೆಯಾಗುತ್ತಿದ್ದು, ಚಿಕ್ಕಮಗಳೂರು, ಕೊಡಗು, ಶಿವಮೊಗ್ಗ ಹಾಗೂ ದಾವಣಗೆರೆ ಎಂಬ ದಕ್ಷಿಣ ಒಳನಾಡು ಜಿಲ್ಲೆಗಳಲ್ಲಿಯೂ ಭಾರಿ ಮಯಾಗುತ್ತಿದೆ. ಹವಾಮಾನ ಇಲಾಖೆ ಈ ಹಿನ್ನೆಲೆಯಲ್ಲಿ, ಈ ಜಿಲ್ಲೆಗಳಿಗೆ ಇದೇ ೧೮ರವರೆಗೆ ರೆಡ್ ಮತ್ತು ಆರೆಂಜ್ ಅಲರ್ಟ್ ಘೋಷಿಸಿದೆ. ಮಳೆಯ ತೀವ್ರತೆಗೆ ಅನುಗುಣವಾಗಿ ಈ ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿ ಉಂಟಾಗುವ ಸಾಧ್ಯತೆ ಇರುವುದರಿಂದ, ನಾಗರಿಕರು ಎಚ್ಚರಿಕೆಯಿಂದ ಇರಬೇಕು ಎಂಬ ಸೂಚನೆ ನೀಡಲಾಗಿದೆ.

**><><><><><<><><><><><><**

ಅಂಚೆ ಇಲಾಖೆಯು ಶೈಕ್ಷಣಿಕ, ಸಾಂಸ್ಕೃತಿಕ, ಸಾಮಾಜಿಕ ಮತ್ತು ಧಾರ್ಮಿಕ ಪುಸ್ತಕಗಳ ಕೈಗೆಟುಕುವ ವಿತರಣೆಗಾಗಿ ಮೀಸಲಾದ ಅಂಚೆ ಸೇವೆಯಾದ 'ಗ್ಯಾನ್ ಪೋಸ್ಟ್' ಅನ್ನು ಪರಿಚಯಿಸಿದೆ. ಈ ಉಪಕ್ರಮ ನೂತನ  ಶಿಕ್ಷಣ ನೀತಿಯ ಉದ್ದೇಶಗಳೊಂದಿಗೆ ಹೊಂದಿಕೆಯಾಗುತ್ತದೆ ಹಾಗೂ ದೂರದ ಮತ್ತು ಗ್ರಾಮೀಣ ಪ್ರದೇಶಗಳನ್ನು ಒಳಗೊಂಡಂತೆ ಭಾರತದಾದ್ಯಂತ ಮುದ್ರಿತ ಶೈಕ್ಷಣಿಕ ವಿಷಯವನ್ನು ಅರ್ಥಮಾಡಿಕೊಳ್ಳಲು ಮತ್ತು ಕೈಗೆಟುಕುವಂತೆ ಮಾಡುವ ಮೂಲಕ ಶೈಕ್ಷಣಿಕ ಅಂತರವನ್ನು ಕಡಿಮೆ ಮಾಡುವ ಗುರಿಯನ್ನು ಹೊಂದಿದೆ. 'ಗ್ಯಾನ್ ಪೋಸ್ಟ್' ಎಲ್ಲಾ ಅಂಚೆ ಕಚೇರಿಗಳ ಮೂಲಕ ಕಾರ್ಯನಿರ್ವಹಿಸುತ್ತಿದ್ದು, ಹೆಚ್ಚಿನ ವಿವರಗಳಿಗಾಗಿ, ಗ್ರಾಹಕರು ತಮ್ಮ ಹತ್ತಿರದ ಅಂಚೆ ಕಚೇರಿಯನ್ನು ಸಂಪರ್ಕಿಸಬಹುದು ಅಥವಾ ಅಧಿಕೃತ ಇಂಡಿಯಾ ಪೋಸ್ಟ್ ಜಾಲತಾಣ www.indiapost.gov.in ಗೆ ಭೇಟಿ ನೀಡಬಹುದು.

**><><><><><<><><><><><><**

ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯದ ಅಧೀನದಲ್ಲಿರುವ ತರಬೇತಿ ಮಹಾನಿರ್ದೇಶನಾಲಯ, ಶೆಲ್ ಇಂಡಿಯಾದೊಂದಿಗೆ ಕೈಜೋಡಿಸಿ, ದೇಶದ ಯುವಕರಿಗೆ ವಿದ್ಯುತ್ ವಾಹನಗಳು ಮತ್ತು ಹಸಿರು ಇಂಧನ ವಲಯಗಳಿಗೆ ಕೌಶಲ್ಯ ನೀಡುವ ತರಬೇತಿ ಕಾರ್ಯಕ್ರಮವನ್ನು ಪ್ರಾರಂಭಿಸಿದೆ ಎಂದು ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ಸಚಿವಾಲಯ ಮಾಹಿತಿ ನೀಡಿದೆ. ಹಸಿರು ಕೌಶಲ್ಯ ಮತ್ತು ವಿದ್ಯುತ್ ವಾಹನಗಳ ತರಬೇತಿ ಕಾರ್ಯಕ್ರಮವು ವಿದ್ಯಾರ್ಥಿಗಳು ಮತ್ತು ಅಧ್ಯಾಪಕರನ್ನು ಹಸಿರು ಇಂಧನ ಮತ್ತು ಇ-ಚಲನಶೀಲತೆಯಲ್ಲಿ ಭವಿಷ್ಯಕ್ಕೆ ಸಿದ್ಧವಾಗುವ ಸಾಮರ್ಥ್ಯಗಳೊಂದಿಗೆ ಸಜ್ಜುಗೊಳಿಸುವ ಗುರಿಯನ್ನು

ಹೊಂದಿದೆ. ಸರ್ಕಾರವು ಹಸಿರು ಇಂಧನ ಮತ್ತು ವಿದ್ಯುತ್ ವಾಹನಗಳ ಅಳವಡಿಕೆಯನ್ನು ಸಕ್ರಿಯವಾಗಿ ಮುನ್ನಡೆಸುತ್ತಿರುವುದರಿಂದ ಈ ಉಪಕ್ರಮವು ಪ್ರಯೋಜನಕಾರಿಯಾಗಲಿದೆ. "ಶೆಲ್ ಇಂಡಿಯಾದೊಂದಿಗಿನ ಸಹಯೋಗವು ಕೌಶಲ್ಯವನ್ನು ಸುಸ್ಥಿರತೆಯೊಂದಿಗೆ ಜೋಡಿಸುವ ಸರ್ಕಾರದ ಆಳವಾದ ಬದ್ಧತೆಯನ್ನು ಪ್ರತಿಬಿಂಬಿಸುತ್ತದೆ ಎಂದು ಕೇಂದ್ರ ಶಿಕ್ಷಣ ಖಾತೆ ರಾಜ್ಯ ಸಚಿವ ಜಯಂತ್ ಚೌಧರಿ ಹೇಳಿದ್ದಾರೆ.

><><><><><<><><><><><

ನೆದರ್‌ಲ್ಯಾಂಡ್ ನ ಆಮ್‌ಸ್ಟೆಲ್‌ವೀನ್ ನಲ್ಲಿ ನಿನ್ನೆ ನಡೆದ ಎಫ್.ಐ.ಹೆಚ್. ಹಾಕಿ ಪ್ರೋ ಪಂದ್ಯದಲ್ಲಿ ಭಾರತ ತಂಡ ಅರ್ಜೆಂಟೈನಾ ವಿರುದ್ಧ ೧-೨ ಗೋಲುಗಳ ಅಂತರದಲ್ಲಿ ಪರಾಭವ ಕಂಡಿತು. ಪಂದ್ಯಕ್ಕೂ ಮುನ್ನ ಏರ್ ಇಂಡಿಯಾ ವಿಮಾನ ದುರಂತದ ಸಂತ್ರಸ್ತರಿಗೆ ಗೌರವಾರ್ಥವಾಗಿ ಒಂದು ನಿಮಿಷ ಮೌನಾಚರಣೆ ನಡೆಸಲಾಯಿತು.

><><><><><<><><><><><

ಜರ್ಮನಿಯ ಮ್ಯುನಿಚ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ಶೂಟಿಂಗ್ ವಿಶ್ವಕಪ್ ೨೦೨೫ರಲ್ಲಿ ಮಹಿಳೆಯರ ೫೦ ಮೀಟರ್ ರೈಫಲ್ ಥ್ರೀ ಪೊಸಿಷನ್ ಸ್ಪರ್ಧೆಯಲ್ಲಿ ಭಾರತದ ಶೂಟರ್ ಸಿಫ್ಟ್ ಕೌರ್ ಸಮ್ರಾ ಕಂಚು ಪದಕ ಗೆದ್ದಿದ್ದಾರೆ. ಸಿಫ್ಟ್ ಅವರು ಫೈನಲ್‌ನಲ್ಲಿ ೪೫೩.೧ ಅಂಕಗಳನ್ನು ಗಳಿಸಿ ಮೂರನೇ ಸ್ಥಾನವನ್ನು ಪಡೆದುಕೊಂಡರು. ನಾರ್ವೆಯ ಜೀನೆಟ್ ಹೆಗ್ ಡೂಸ್ಟಾಡ್ ಅವರು ೪೬೬.೯ ಅಂಕಗಳೊಂದಿಗೆ ಚಿನ್ನದ ಪದಕ, ಹಾಗೂ ಸ್ವಿಟ್ಜರ್‌ಲ್ಯಾಂಡ್‌ನ ಎಮಿಲಿ ಜ್ಯಾಗ್ಗಿ ಅವರು ೪೬೪.೮ ಅಂಕಗಳೊಂದಿಗೆ ಬೆಳ್ಳಿ ಪದಕ ಗೆದ್ದಿದ್ದಾರೆ. ಈ ಸಾಧನೆಯೊಂದಿಗೆ ಮುನಿಕ್ ವಿಶ್ವಕಪ್‌ನಲ್ಲಿ ಭಾರತದ ಎರಡನೇ ಪದಕ ಖಚಿತವಾಗಿದೆ. ಇದಕ್ಕೂ ಮೊದಲು, ಎಲ ವೆನಿಲ್ ವಲ ರಿವನ್ ಮಹಿಳೆಯರ ೧೦ ಮೀ. ಏರ್ ರೈಫಲ್ ಸ್ಪರ್ಧೆಯಲ್ಲಿ ಕಂಚು ಪದಕ ಗೆದ್ದಿದ್ದರು. ಈ ಮೂರನೇ ಹಂತದ ವಿಶ್ವಕಪ್ ಟೂರ್ನಿಯಲ್ಲಿ ೬೮ ರಾಷ್ಟ್ರಗಳಿಂದ ಸುಮಾರು ೬೦೦ ಶೂಟರ್‌ಗಳು ಪಾಲ್ಗೊಂಡಿದ್ದು, ತೀವ್ರ ಪೈಪೋಟಿ ಏರ್ಪಟ್ಟಿದೆ.

><><><><><<><><><><><